2ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

ಸಿ.ಸಿ.ನಂಃ 7132 ಃ 2013

| | | | |
|---|---|---|---|
| ಸಾಕ್ಷಿದಾರನ ಹೆಸರು | ಎನ್ ಹೆಚ್ ಮನೋಜ್ ಕುಮಾರ್ | ಸಿ ಡಬ್ಲ್ಯು | 8 |
| ತಂದೆಯ ಹೆಸರು | ಲೇಟ್ ನಾರಾಯಣ್ | ಪಿ ಡಬ್ಲ್ಯು | 1 |
| ವಯಸ್ಸು | 47 ವರ್ಷ | | |
| ಉದ್ಯೋಗ | ಪಿ.ಐ, ಎಸ್.ಟಿ.ಎಫ್ | | |
| ವಾಸಸ್ಥಾನ | ಬನ್ನೇರುಘಟ್ಟ ರಸ್ತೆ, ಬೆಂಗಳೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 30.01.2025.

ಕಲಂ. 299 ರ ಸಿ.ಆರ್.ಪಿ.ಸಿ ಅಡಿಯಲ್ಲಿ ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಮಾರ್ಚ್ 2009 ರಿಂದ ಡಿಸೆಂಬರ್ 2012 ರವರೆಗೆ ಜೆ.ಪಿ ನಗರ ಪೊಲೀಸ್ ಠಾಣೆಯಲ್ಲಿ ನಾನು ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ13.05.2010 ರಂದು ಕ್ರೈಂ ನಂ 403/2010 ಕಡತವನ್ನು ಚಾಸಾ 8 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ಚಾಸಾ 5 ಮತ್ತು 6 ರವರುನ್ನು ಬರಮಾಡಿಕೊಂಡು ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಪಂಚರಾದ ಚಾಸಾ 5 ಮತ್ತು 6 ರವರ ಸಮಕ್ಷಮ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಸಂಜೆ 4.30ರಿಂದ 5.30 ಗಂಟೆಯವರೆಗೆ ಜರುಗಿಸಿರುತ್ತೇನೆ. ಸದರಿ ಪಂಚನಾವೆಯನ್ನು ನಿಪಿ 1 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ-1ಎ ಎಂದು ಗುರ್ತಿಸಿದ್ದೇನೆ. ಪಂಚನಾಮೆಯ ಸಮಯದಲ್ಲಿ ಪಿರ್ಯಾದಿ ಹಾಜರುಪಡಿಸಿದ ದಾಖಲಾತಿಗಳನ್ನು ಠಾಣಾ ಫಿ.ಎಫ್ 117/2010 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ 2 ಮತ್ತು 3 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 12.07.2011 ರಂದು ಚಾಸಾ 4 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಮತ್ತು ಚಾಸಾ 7 ರವರನ್ನು ಆರೋಪಿ ಪತ್ತೆಗಾಗಿ ನೇಮಕ ಮಾಡಿರುತ್ತಾರೆ. ದಿಃ 15.08.2011 ರಂದು ಆರೋಪಿಗಳು ಪತ್ತೆಯಾಗಿರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ನಿಪಿ 2 ಹಾಗೂ ಅದರಲ್ಲಿರುವ ನನ್ನ ಸಹಿಯನ್ನು ನಿಪಿ-2ಎ ಎಂದು ಗುರ್ತಿಸಲಾಯಿತು. 3ನೇ ಆರೋಪಿಯ ವಿರುದ್ದ ಯಾವುದೇ ಸಾಕ್ಷ್ಯ ಲಭ್ಯವಾಗದೇ ಇರುವುದರಿಂದ ಅಂತಿಮ ವರದಿಯಲ್ಲಿ

3ನೇ ಆರೋಪಿಯನ್ನು ಕೈಬಿಡಲಾಗಿದೆ. ನಂತರ ತನಿಖೆ ಪೂರ್ಣಗೊಳಿಸಿ 1 ಮತ್ತು 2ನೇ ಆರೋಪಿತರ ವಿರುದ್ದ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)
2ನೇ ಅ ಮು ಮ ದಂ.